1) ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು:

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ನಮ್ಮ ಸೂಳೆಕೆರೆಯಲ್ಲಿ ಬಸ್ ಬಿದ್ದು ಮೂರು ಜನರು ಸತ್ತು ಹೋಗಿದ್ದು, 47 ಜನರಿಗೆ ಗಾಯಗಳಾಗಿವೆ. ಸರ್ಕಾರದಿಂದ ಇನ್ನೂ ಉತ್ತರದಿಂದ ಬರಲಿಲ್ಲ.

ವಿಷಯ : ಅಕಾಲಿಕ ಮಳೆಯಿಂದ ಬೆಳೆ ನಾಶವಾಗಿರುವ ಬಗ್ಗೆ ಚರ್ಚೆಗೆ ಅನುಮತಿ ಕೋರಿಕೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಭಾರೀ ಮಳೆಯಾಗಿ ಹತ್ತಿ, ಭತ್ತ ಹೀಗೆ ಬಹಳಷ್ಟು ಪೀಕ್‌ಗಳು ನಾಶವಾಗಿವೆ. ಒಂದೆರಡು ದಿನಗಳ ಅಕಾಲಿಕ ಮಳೆಯಿಂದ, ಯಾವ ಸಮಯಕ್ಕೆ ಮಳೆ ಬರಬೇಕು, ಆಗ ಮಳೆ ಬರದೆ, ಮಳೆಗಾಲವಲ್ಲದ ಕಾಲಕ್ಕೆ ಮಳೆ ಬಂದರೆ ಏನಾಗುತ್ತದೆಂಬ ಪರಿಣಾಮ ಮೊನ್ನೆ 2–3 ದಿನ ಮಳೆ ಆಗಿದ್ದರಿಂದ ಬಹಳ ದೊಡ್ಡ ಪ್ರಮಾಣದಲ್ಲಿ ನಷ್ಟವಾಗಿದೆ. ಹೀಗಾಗಿ ಸರ್ಕಾರದಿಂದ ಇದರ ಬಗ್ಗೆ ಏನಾದರೂ ಸರ್ವೇ ಮಾಡುವುದು ಏನಾದರೂ ಆಗಿದೆಯೇ? ಇತ್ತ ಭತ್ತ ನಾಶವಾಗಿ ಭತ್ತದ ಗುಣಮಟ್ಟ ಪೂರ್ತಿ ನಾಶವಾಗಿದೆ, ಹತ್ತಿ ನಾಶವಾಗಿದೆ. ಇನ್ನೂ ಹಲವಾರು ಪೀಕುಗಳು, ತೊಗರಿ ಈ ರೀತಿ ಹಲವಾರು ಪೀಕುಗಳು ಕೊಪ್ಪಳ ಭಾಗದಲ್ಲಿ ಗುಲ್ಬರ್ಗಾ, ಶಿವಮೊಗ್ಗ ಭಾಗದಲ್ಲಿ, ಕೊಡಗಿನಲ್ಲಿ ಸಹ ಕಾಫಿ ಈ ರೀತಿ ಅಕಾಲಿಕ ಮಳೆಯಿಂದ ಬಹಳಷ್ಟು ತೊಂದರೆಯಾಗಿದೆ. ಅದರ ಬಗ್ಗೆ ಸ್ವಲ್ಪ ಚರ್ಚೆ ಮಾಡಬೇಕಾಗುತ್ತದೆ. zero hour ನಲ್ಲಿ ಕೊಟ್ಟಿದ್ದೇನೆ. ಅದಕ್ಕಾಗಿ ಸರ್ಕಾರ ತೀವ್ರತರವಾಗಿ ಗಮನ ಹರಿಸಬೇಕು.

ಅಧ್ಯಕ್ಷರು : ಇಂದು ಚರ್ಚೆಗೆ ಅವಕಾಶ ಕೊಡುತ್ತೇನೆ. ಅರ್ಧ ಗಂಟೆಯಾದರೂ ಬೇಕಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಸಮೀಕ್ಷೆ ಮಾಡುವುದಕ್ಕೆ ಸರ್ಕಾರ ತಕ್ಷಣ ಸೂಚನೆ ಕೊಡಬೇಕು. ನಂತರ ಪರಿಹಾರ ಕೊಡಿಸಬೇಕು.